ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ- ಆಡಳಿತ / ಶಿಕ್ಷಕ ಮಿತ್ರ / 2020-21 ದಿನಾಂಕ:06-07-2021

-:ಜ್ಞಾಪನಾ:- **ಅತೀ ಜರೂರು**

**ವಿಷಯ:** ಇ.ಇ.ಡಿ.ಎಸ್ ತಂತ್ರಾಂಶದಲ್ಲಿ ಶಿಕ್ಷಕರ ಮಾಹಿತಿಯನ್ನು ಸಂಪೂರ್ಣವಾಗಿ ಇಂದೀಕರಿಸದಿರುವ ಬಗ್ಗೆ.

**ಉಲ್ಲೇಖ:** 1.ಈ ಕಛೇರಿ ಪತ್ರ ಸಂಖ್ಯೆ:ಶಿ.ವ.ಕೋಶ.ವ/01/2020-21 ದಿನಾಂಕ:30-06-2021
2.ದಿನಾಂಕ:05-07-2021 ರ ವೀಡಿಯೋ ಸಂವಾದ

*******

ಇ.ಇ.ಡಿ.ಎಸ್ ತಂತ್ರಾಂಶದಲ್ಲಿ ಶಿಕ್ಷಕರ ಸೇವಾ ಮಾಹಿತಿಯನ್ನು ಪರಿಪೂರ್ಣವಾಗಿ ಇಂದೀಕರಿಸುವಂತೆ ತಿಳಿಸಿ ರಾಜ್ಯದ ಎಲ್ಲಾ ಡಿ.ಡಿ.ಒ ಗಳಿಗೆ ಕಳೆದ 2 ತಿಂಗಳುಗಳಿಂದ ಅವಕಾಶ ನೀಡಲಾಗಿರುತ್ತದೆ. ಆದರೆ ಮಾಹಿತಿಯನ್ನು ಇಂದೀಕರಿಸುವಾಗ ಶಿಕ್ಷಕರ ವೃಂದ, ಹುದ್ದೆ, ಬೋಧನಾ ವಿಷಯ, ಸೇವಾ ಮಾಹಿತಿಯನ್ನು ಶಿಕ್ಷಕರ ಸೇವಾ ಪುಸ್ತಕದಲ್ಲಿರುವಂತೆ ಅಳವಡಿಸದೇ ಹಲವಾರು ಡಿ.ಡಿ.ಒ ಗಳು ಉದಾಸೀನತೆ ತೋರಿರುವುದು ಕಂಡುಬಂದಿರುತ್ತದೆ. ಹಾಗೂ ಸದರಿ ಮಾಹಿತಿಯನ್ನು ಪ್ರಸ್ತುತ ದಿನಾಂಕದವರೆಗೂ ಶಿಕ್ಷಕರ ಸೇವಾ ಮಾಹಿತಿಯನ್ನು ಸರಿಪಡಿಸಿಕೊಡುವಂತೆ ಕೋರಿ ಹಲವಾರು ಡಿ.ಡಿ.ಒ ಗಳು ಮನವಿ ಸಲ್ಲಿಸುತ್ತಿರುವುದು ವಿಷಾದನೀಯ. ಇದರಿಂದ 2019-20 ಮತ್ತು 2020-21 ನೇ ಸಾಲಿನ ಶಿಕ್ಷಕರ ವರ್ಗಾವಣಾ ತಂತ್ರಾಂಶದಲ್ಲಿ ಖಾಲಿ ಹುದ್ದೆ ಮ್ಯಾಪಿಂಗ್ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ರಾಜ್ಯದ ಎಲ್ಲಾ ಉಪನಿರ್ದೇಶಕರ ಕಛೇರಿಯಿಂದ ಒರ್ವ ಪ್ರೋಗ್ರಾಮರ್ / ವರ್ಗಾವಣೆ ಪ್ರಕ್ರಿಯೆ ನಿರ್ವಹಿಸುತ್ತಿರುವ ಸಿಬ್ಬಂದಿ ಮತ್ತು ಜಿಲ್ಲಾ ವರ್ಗಾವಣಾ ನೋಡಲ್ ಅಧಿಕಾರಿಗಳು ಖುದ್ದು ಹಾಜರಾಗುವುದು. ಯಾವುದೇ ಕಾರಣಕ್ಕೂ ಅಧೀನ ಕಛೇರಿ ಸಿಬ್ಬಂದಿ/ಶಿಕ್ಷಕರನ್ನು ತಿದ್ದುಪಡಿಗಾಗಿ ನೇರವಾಗಿ ಈ ಕಛೇರಿಗೆ ಕಳುಹಿಸದಿರಲು ಕಟ್ಟು ನಿಟ್ಟಾಗಿ ಸೂಚಿಸಿದೆ.

ಜಿಲ್ಲಾ ಉಪನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಪ್ರಾಥಮಿಕ/ಪ್ರೌಢ ಮತ್ತು ಎಲ್ಲಾ ಕಛೇರಿಗಳಲ್ಲಿನ ಶಿಕ್ಷಕ/ಬೋಧಕ ಸಿಬ್ಬಂದಿಗಳ ತಿದ್ದುಪಡಿಯಾಗಬೇಕಾದ ಪ್ರಕರಣಗಳನ್ನು ಕ್ರೋಡೀಕರಿಸಿಕೊಂಡು ಅಗತ್ಯ ದಾಖಲೆಗಳೊಂದಿಗೆ ನಿಗದಿತ ದಿನಾಂಕದಂದು **ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇಲ್ಲಿನ 4 ನೇ ಮಹಡಿಯ** ಸಭಾಂಗಣದಲ್ಲಿ ಖುದ್ದು ಹಾಜರಾಗಿ ಸರಿಪಡಿಸಿಕೊಳ್ಳಲು **ಅಂತಿಮ ಅವಕಾಶ ನೀಡಿದೆ.** ಇ.ಇ.ಡಿ.ಎಸ್ ತಂತ್ರಾಂಶದಲ್ಲಿ ಯಾವುದೇ ತಿದ್ದುಪಡಿ ಇಲ್ಲದಿರುವ ಬಗ್ಗೆ ಖಚಿತಪಡಿಸಿಕೊಂಡು ತದನಂತರ ವರ್ಗಾವಣಾ ತಂತ್ರಾಂಶದಲ್ಲಿ **POST VERIFICATION** ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ವರ್ಗಾವಣೆ ಅಥವಾ ಇತರೆ ಸೇವಾ ಸೌಲಭ್ಯಗಳು ವಂಚಿತರಾಗಿರುವ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾದಲ್ಲಿ ಸಂಬಂಧಪಟ್ಟ ಡಿ.ಡಿ.ಒ ಗಳನ್ನೇ ನೇರ ಹೊಣೆಗಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲು ಸೂಕ್ತ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

| ನಿಗಧಿಪಡಿಸಿದ ದಿನಾಂಕ | ವಿಭಾಗ |
|---|---|
| ದಿನಾಂಕ:07-07-2021<br>**ಬೆಳಿಗ್ಗೆ 8.30** | ಬೆಂಗಳೂರು ಮತ್ತು ಮೈಸೂರು ವಿಭಾಗ |
| ದಿನಾಂಕ:08-07-2021<br>**ಬೆಳಿಗ್ಗೆ 8.30** | ಧಾರವಾಡ ಮತ್ತು ಕಲಬುರ್ಗಿ |

**ವಿ.ಸೂ: ಎಲ್ಲಾ ಉಪನಿರ್ದೇಶಕರು ದಿನಾಂಕ:09-07-2021 ರಂದು ಸಂಜೆ 5 ರೊಳಗೆ ವರ್ಗಾವಣಾ ತಂತ್ರಾಂಶದಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ, ಖಾಲಿ ಇರುವ ಹುದ್ದೆಗಳ ವರದಿಯನ್ನು DOWNLOAD ಮಾಡಿಕೊಂಡು ಇದೇ ತಂತ್ರಾಂಶದ ತಮ್ಮ ಲಾಗಿನಲ್ಲಿ ಅಪ್ ಲೋಡ್ ಮಾಡುವುದು.**

6/7/2021

ನಿರ್ದೇಶಕರು(ಇತರೆ ಪರೀಕ್ಷೆಗಳು)
ಹಾಗೂ ಮುಖ್ಯಸ್ಥರು ವರ್ಗಾವಣಾ ಕೋಶ

**ಪ್ರತಿಯನ್ನು:**

1. ಮಾನ್ಯ ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

**ಇವರಿಗೆ,**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ರವರ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ರವರ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ನಿರ್ದೇಶಕರು (ಪ್ರೌಢಶಿಕ್ಷಣ) ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ನಿರ್ದೇಶಕರು(ಡಿ.ಎಸ್.ಇ.ಆರ್.ಟಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6. ನಿರ್ದೇಶಕರು ಕ.ಪ್ರೌ.ಶಿ.ಪ.ಮಂಡಳಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7. ನಿರ್ದೇಶಕರು ಇತರೆ ಪರೀಕ್ಷೆಗಳು, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
8. ನಿರ್ದೇಶಕರು ಕ.ಪ.ಪು.ಸಂಘ(ರಿ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
9. ನಿರ್ದೇಶಕರು ಸಿಸ್ಲೆಪ್ , ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
10. ವಿಭಾಗೀಯ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾಂ, ಕಲ್ಬುರ್ಗಿ ವಿಭಾಗ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
11. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
12. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
13. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
14. ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ)
15. ಹಿರಿಯ ಸಹಾಯಕ ನಿರ್ದೇಶಕರು(ಆನ್ ಲೈನ್ ಸೇವೆಗಳು), ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
16. ಕಛೇರಿ ಪ್ರತಿ